ಶ್ರೀ ಬಿ. ರಾಚಯ್ಯ.—ಅಲ್ಲಿ ಮುನಿಸಿಪಾಲಿಟಿ ಬಂದಿದೆ. ಅರಸೀಕೆರೆಯಲ್ಲಿ ಅದರ ಭಾಗವೂ ಇಲ್ಲ ಎಂದರೆ ನಮ್ಮ ಇಲಾಖೆಯಿಂದ ಪೂರಾ ಹಣವನ್ನು ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಸಾರ್ವಜನಿಕರಿಂದ ಹಾಗೂ ಮುನಿಸಿಪಾಲಿಟಿಯಿಂದ ಹಣವನ್ನು ಒದಗಿಸಿಕೊಟ್ಟರೆ ಮಿಕ್ಕಿದ್ದನ್ನು ನಾವು ಹಾಕಿ ಕೆಲಸ ಪ್ರಾರಂಭ ಮಾಡಬಹುದು.

ರಾಜ್ಯದಲ್ಲಿ ಪ್ಲಾನ್ ಸ್ಕೀಂಗೆ ಸೇರಿದ ಶಾಲೆಗಳು

೨೨೪. ಶ್ರೀ ಎಂ. ಆನಂದರಾವ್ (ಶಿವಮೊಗ್ಗ) —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಪ್ಲಾನ್ ಸ್ಕೀಂಗೆ ಸೇರಿದ ಶಾಲೆಗಳ ಸಂಖ್ಯೆ ಎಷ್ಟು ಮತ್ತು ಸದರಿ ಶಾಲೆಗಳಲ್ಲಿರುವ ಉಪಾಧ್ಯಾಯರುಗಳು ಹಾಗೂ ಇತರೆ ನೌಕರರುಗಳ ಸಂಖ್ಯೆ ಎಷ್ಟು ?

(ಆ) ಮೇಲ್ಕಂಡ ಉಪಾಧ್ಯಾಯರುಗಳಿಗೆ ಹಾಗೂ ನೌಕರರುಗಳಿಗೆ ಪ್ರತಿ ಸಲ ೩-೪ ತಿಂಗಳಿಗೊಮ್ಮೆ ಸಂಬಳ ನೀಡಲಾಗುತ್ತಿರುವುದಕ್ಕೆ ಕಾರಣಗಳೇನು ಮತ್ತು ಈ ತೊಂದರೆ ನಿವಾರಿಸಲು ಯಾವ ಕ್ರಮಕೈಗೊಳ್ಳಲಾಗಿದೆ.

(ಇ) ಈ ಸ್ಕೀಂನ ಅವಧಿಯು ಎಲ್ಲಿಯವರೆಗೆ ಇದೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ರಾಜ್ಯದಲ್ಲಿ ಪ್ಲಾನ್ ಸ್ಕೀಂಮನಲ್ಲಿ ಬರುವ ಶಾಲೆಗಳು ೨೩೭
ಉಪಾಧ್ಯಾಯರುಗಳ ಸಂಖ್ಯೆ ೧೫೮೭
ಇತರೆ ನೌಕರರ ಸಂಖ್ಯೆ ೬೪೩ | ೨೨೫೦

(ಆ) ಸರ್ಕಾರದಿಂದ ಸುಮಾರು ಐದು ತಿಂಗಳಿಗೆ ಸಾಕಾಗುವಷ್ಟು ಹಣವನ್ನು ಒದಗಿಸಲಾಗಿದೆ ಯಾವುದೇ ಕಾರಣದಿಂದ ವಿಳಂಬ ಮಾಡದೆ ಕೂಡಲೇ ಬಿಡುಗಡೆ ಮಾಡಲು ಆದೇಶ ನೀಡಲಾಗಿದೆ.

(ಇ) ಆರನೇಯ ಯೋಜನೆ ಅವಧಿಯು ಕೊನೆಯವರೆಗೆ ಅಂದರೆ ೩೧-೩-೧೯೮೫ರ ವರೆಗೆ.

ಶ್ರೀ ಎಂ. ಆನಂದರಾವ್.—ಅಧ್ಯಕ್ಷರೇ, ಈ ಬಗ್ಗೆ ಕೇಂದ್ರದ ವಾರ್ಷಿಕ ಆನುದಾನದ ಹಣ ಎಷ್ಟು ? ಈ ಒಂದು ಸ್ಕೀಮ್ ಮುಗಿದ ಮೇಲೆ ಇವರಿಗೆ ಇತರೇ ಸರ್ಕಾರಿ ನೌಕರರಿಗೆ ಸಿಗುವ ಹಾಗೆ ಎಲ್ಲಾ ಸೌಲಭ್ಯಗಳು ಸಿಗುತ್ತದೆಯೇ ?

ಶ್ರೀ ಬಿ. ರಾಚಯ್ಯ.—ತಾವು ಕೇಳಿರುವ ಮೊತ್ತದ ಬಗ್ಗೆ ಅಂಕಿ ಅಂಶ ನನ್ನ ಹತ್ತಿರ ಇರುವ ಕಾಗದ ಪತ್ರಗಳಿಂದು ಸಿಗುತ್ತಿಲ್ಲ. ಅದನ್ನು ಬೇಕಾದರೆ ತರಿಸಿ ಕೊಡುತ್ತೇನೆ. ಈ ಯೋಜನೆ ಆದ ಮೇಲೆ ಕೂಡಾ ಇವರನ್ನು ನಮ್ಮ ಸರ್ಕಾರಿ ನೌಕರರಂತೆ ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಂಡಿದ್ದೇವೆ.

ವಿಷಯ.—ಕನಕಪುರ ರೂರಲ್ ಕಾಲೇಜಿನ ವ್ಯವಸ್ಥಾಪಕರ ವಿರುದ್ಧ ಅರ್ಪಿಸಲಾದ ಮನವಿಗಳು.

೩೪೫. ಕೆ. ಜಿ. ಶ್ರೀನಿವಾಸಮೂರ್ತಿ (ಕನಕಪುರ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಕನಕಪುರ ರೂರಲ್ ಕಾಲೇಜಿನ ಪ್ರಾಧ್ಯಾಪಕರು ಅಲ್ಲಿಯ ವ್ಯವಸ್ಥಾಪಕರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮನವಿ ಸಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಯಾವ ಯಾವ ಕ್ರಮಗಳನ್ನು ತೆಗೆದ ಕೊಂಡಿದ್ದಾರೆ ?